

ಭಾರೀ ಸದ್ದು ಮಾಡುವ ಈ ಸಿಡಿಮದ್ದುಗಳ ಗದ್ದಲದ ಭರಾಟೆ, ಪಟಾಕಿ ಕಾರ್ಮಿಕರ ತವಕತಲ್ಲಣಗಳು ಹಾಗೂ ಪರಿಸರ ಮಾಲಿನ್ಯದ ಕಾಳಜಿಯನ್ನು ಮರೆಸುವಷ್ಟು ತೀವ್ರ!



ಬದಿಗಿರಿಸೋಣ ಗೋಳು; ಪಟಾಕಿಗೆ ಸುತ್ತೋಣ ನೂಲು



ಯಾರದೋ ಮನೆಯ ದೀಪಾವಳಿ ಸಂಭ್ರಮಕ್ಕಾಗಿ ಬದುಕನ್ನೇ ಕುಲುಮೆಯಾಗಿಸಿಕೊಂಡಿರುವ ಪಟಾಕಿ ತಯಾರಿಸುವ ಕಾರ್ಮಿಕರು

ಮಾಲಿನ್ಯದ ಆತಂಕ. ಬೆಳಕಿನ ಹಬ್ಬದ ಗರ್ಭದಲ್ಲಿ ಕತ್ತಲೆಯೇ ಇರುವ ವೈರುಧ್ಯವಿದು.

ಈ ಟಿಪ್ಪಣಿಯೊಂದಿಗಿನ ಚಿತ್ರಗಳನ್ನು ಗಮನಿಸಿ ನೋಡಿ. ಮೈಕೈಗೆ ಮದ್ದಿನ ಹುಡಿಯನ್ನು ಮೆತ್ತಿಕೊಂಡಿರುವ ಅಣ್ಣ–ತಮ್ಮಂದಿರ ಬದುಕೇ ಒಂದು ಪಟಾಕಿಯಂತೆ ಕಾಣಿಸುತ್ತಿದೆ. ಅವರ ಅತಂತ್ರ ಹಾಗೂ ಅಪಾಯಕಾರಿ ಬದುಕುಗಳನ್ನು ಕಲ್ಪಿಸಿಕೊಳ್ಳುವುದು ನಮಗೆ ಸಾಧ್ಯವಾದರೆ, ಪಟಾಕಿಯ ಕುರಿತಾದ ರಮ್ಯಕಲ್ಪನೆಗಳೆಲ್ಲ ಠುಸ್ ಎನ್ನುವುದು ಖಚಿತ. ಇನ್ನು ಪಟಾಕಿಯಿಂದ ಉಂಟಾಗುವ ಪರಿಸರ ಮಾಲಿನ್ಯದ ಬಗ್ಗೆ ತಜ್ಞರು ಪ್ರತಿ ವರ್ಷ ಆತಂಕ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಪ್ರಕೃತಿಯ ಆರೋಗ್ಯಕ್ಕೆ ಮಾತ್ರವಲ್ಲ – ಜನರ ಆರೋಗ್ಯಕ್ಕೂ ಪಟಾಕಿ ಮಾರಕ. ಎಳೆಯ ಕಂದಮ್ಮಗಳು ಹಾಗೂ ಹಿರಿಯ ನಾಗರಿಕರ ಪಾಲಿಗಂತೂ ಪಟಾಕಿಗಳು ದುಸ್ವಪ್ನಗಳೇ ಸರಿ.

ಪಟಾಕಿಯಿಂದ ದೂರವಿರುವುದು ಸುಲಭವೇನೂ ಅಲ್ಲ. ಆದರೆ, ಪಟಾಕಿ ಬಳಕೆಯನ್ನು ಹಿತ–ಮಿತಗೊಳಿಸುವುದು ನಮ್ಮ ಕೈಯಲ್ಲೇ ಇದೆ. ಈಗ ಪರಿಸರಸ್ನೇಹಿ ‘ಹಸಿರು ಪಟಾಕಿ’ಗಳೂ ಲಭ್ಯ. ಸುಡುಮದ್ದುಗಳ ಸಂಭ್ರಮ ಮಕ್ಕಳ ಪಾಲಿಗಿರಲಿ. ದೊಡ್ಡವರು ನಾವು ಮಕ್ಕಳ ಕೇಕೆಯಲ್ಲಿ ಪಟಾಕಿಯ ಸದ್ದನ್ನೂ, ಅವರ ಕಂಗಳಲ್ಲಿ ಹೂಕುಂಡಗಳ ಬೆಳಕನ್ನೂ ಕಾಣೋಣ. ಪ್ರೀತಿ ತುಂಬಿದ ಒಳ್ಳೆಯ ಮಾತಿಗಿಂತಲೂ ಸೊಗಸಾದ ಪಟಾಕಿ ಇನ್ನೊಂದುಂಟೆ?